**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 235/2014 .**

**ಪಿ.ಡಬ್ಲ್ಯೂ: 16**
**ಸಿ.ಡಬ್ಲ್ಯೂ: 11**

**ಹೆಸರು** : ಎಸ್.ಬಿ ಸಿದ್ದನಾಯಕ

**ತಂದೆಯ ಹೆಸರು** : ಬೈರಾನಾಯಕ

**ವಯಸ್ಸು** : 36 ವರ್ಷ

**ಉದ್ಯೋಗ** : ಮುಖ್ಯಪೇದೆ, ಪಂಚನಹಳ್ಳಿ

**ವಾಸಸ್ಥಳ** : ಪಂಚನಹಳ್ಳಿ,

**ದಿನಾಂಕ: 12-07-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ನಾನು 2012 ರಿಂದ 2015 ರ ವರೆಗೂ ತರೀಕೆರೆ ಪೊಲೀಸ್ ಠಾಣೆಯಲ್ಲಿ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಾನು ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾ.ಸಾ-14 ರವರು ನಿರ್ದೇಶಿಸಿದ ಮೇರೆಗೆ ದಿ:06-06-2013 ರಂದು ತರೀಕೆರೆ ತಾಲ್ಲೂಕಿನ ಬಾವಿಕೆರೆ ಗ್ರಾಮದ ಕಾವೇರಿ ಗ್ರಾಮೀಣ ಬ್ಯಾಂಕ್ ನಡೆಸಲು ಬಾಡಿಗೆ ನೀಡಿರುವ ಸುರೇಶ್ ರವರ ಬ್ಯಾಂಕ್ ಕಟ್ಟಡದ ಒಳಭಾಗದಲ್ಲಿ ಪಂಚರಾದ ಶ್ರೀಧರಗೌಡ ಹಾಗೂ ವೆಂಕಟೇಶ್ ರವರ ಸಮಕ್ಷಮ ಮಧ್ಯಾಹ್ನ 1-10 ರಿಂದ 2-50 ರ ಸಮಯದವರೆಗೂ ಚಾ.ಸಾ-14 ರವರು ಮಹಜರ್ ಕ್ರಮ ಜರುಗಿಸಿದ್ದು ನಾನು ಮಹಜರ್ ನ ವಕ್ಕಣೆಯನ್ನು ನನ್ನ ಕೈ ಬರಹದಲ್ಲಿ ಬರೆದಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿ.ಪಿ-18 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-18(ಇ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ನಾನು ನಿ.ಪಿ-19 ರಂತೆ ಛಾಯಾಚಿತ್ರವನ್ನು ತೆಗೆದಿರುತ್ತೇನೆ. ದಿ:03-06-2013 ರಂದು ಕಾವೇರಿ ಗ್ರಾಮೀಣ ಬ್ಯಾಂಕ್ನಲ್ಲಿ ಕ್ಯಾಶಿಯರ್ ಆಗಿದ್ದ ಸಚಿನ್

ಕುಮಾರ್ ರವರು ಗ್ರಾಹಕರು ಬ್ಯಾಂಕಿಗೆ ಕಟ್ಟಿದ *15* ಲಕ್ಷ ರೂ ಹಣವನ್ನು ಬಂಡಲ್ ಮಾಡಿ ವೋಚರ್ ಬರೆದು, ತರೀಕೆರೆ ಶಾಖೆಯ ಕಾವೇರಿ ಗ್ರಾಮೀಣ ಬ್ಯಾಂಕಿನ ಮುಖ್ಯ ಕಛೇರಿಗೆ ಸಂದಾಯ ಮಾಡಲು ಅಂದಿನ ಬ್ಯಾಂಕ್ ಮ್ಯಾನೇಜರ್ ಆಗಿದ್ದ ನ್ಯಾಯಾಲಯದ ಮುಂದಿರುವ ಆರೋಪಿಗೆ ನೀಡಿದ್ದು ಸದರಿ ಆರೋಪಿ ಹಣವನ್ನು ಬ್ಯಾಂಕಿಗೆ ಜಮಾ ಮಾಡದೇ ಬ್ಯಾಂಕಿಗೆ ಹಾಗೂ ಗ್ರಾಹಕರಿಗೆ ವಂಚನೆ ಮಾಡಿದ ಕುರಿತು ನಮಗೆ ದೂರು ಬಂದ ಮೇರೆಗೆ ತನಿಖಾಧಿಕಾರಿಗಳು ಮಹಜರ್ ಜರುಗಿಸಿರುತ್ತಾರೆ.

***ಪಾಟೀಸವಾಲು : ಆರೋಪಿತರ ಪರ ವಕೀಲರಿಂದ.***

ಪ್ರಾದೇಶಿಕ ವ್ಯವಸ್ಥಾಪಕರು ಠಾಣೆಗೆ ಹಾಜರಾಗಿ ದೂರು ನೀಡಿದ ಮೇರೆಗೆ ಆರೋಪಿತನು ಗ್ರಾಹಕರ ಹಾಗೂ ಬ್ಯಾಂಕಿನ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಕುರಿತು ನನಗೆ ತಿಳಿದಿದೆ. ನನ್ನ ಮೇಲಾಧಿಕಾರಿಗಳು ಹಾಗೂ ಪಂಚರು ಹೇಳಿದ ಮೇರೆಗೆ ನಾನು ಮಹಜರಿನಲ್ಲಿ ಬರೆದುಕೊಂಡಿರುತ್ತೇನೆ. ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***